ಒಬ್ಬ ಸದಸ್ಯರು.—ಪ್ರಾಪರ್ ಕೇಸುಗಳನ್ನು ನಡೆಸತಕ್ಕವರಿಗೆ ಶುಲ್ಕವನ್ನು ಹೆಚ್ಚು ಮಾಡಿದ್ದೀರಾ ಹೇಗೆ ?

ಶ್ರೀ ಡಿ. ಕೆ. ನಾಯ್ಕರ್.—ಸೆಷನ್ ಕೇಸುಗಳನ್ನು ನಡೆಸುವಾಗ ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಏನು ಡೈಲಿ ಅಲೋಯನ್ಸ್ ಕೊಡ್ತಾರೆಯೋ ಅದನ್ನು ಈ ಪ್ರಾಪರ್ ಕೇಸುಗಳನ್ನು ನಡೆಸತಕ್ಕ ಪ್ಲೀಡರುಗಳಿಗೂ ಕೊಡುತ್ತಾರೆ. ಈಗ ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಸೆಷನ್ ಕೇಸನ್ನು ನಡೆಸುವಾಗ ಒಂದ ದಿವಸಕ್ಕೆ 40 ರೂಪಾಯಿಗಳನ್ನು ಕೊಡಲಾಗುತ್ತದೆ. ಅದೇ ರೇಟನ್ನು ಈ ಪ್ರಾವರ್ ಕೇಸನ್ನು ನಡೆಸತಕ್ಕ ಪ್ಲೀಡರುಗಳಿಗೂ ಕೊಡಲಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಇವು ಬಹಳ ಮುಖ್ಯವಾದ ಹುದ್ದೆಗಳು. ಆದ್ದರಿಂದ ಇವರುಗಳ ಸೀನಿಯಾರಿಟಿ ಲಿಸ್ಟ್ ಅನ್ನು ಮೇಂಟೇನ್ ಮಾಡುವುದು ಸರಿಯಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ನಾನು ಈಗಾಗಲೇ ಹೇಳಿದ ಹಾಗೆ ಅದು ಪೀರಿಯಾಡಿಕರ್ ಅಪಾಯಿಂಟ್‌ಮೆಂಟ್. ಅದು ನಾಲ್ಕು ವರ್ಷ ಮಾತ್ರ ಇರುತ್ತದೆ. ಆ ಹುದ್ದೆಗೆ ಪೆನ್‌ಷನ್ ಮತ್ತು ಗ್ರಾಚ್ಯುಯಿಟಿ ಯಾವುದೂ ಸಿಕ್ಕುವುದಿಲ್ಲ. ಆದ್ದರಿಂದ ಆ ಹುದ್ದೆಗಳ ಸೀನಿಯಾರಿಟಿ ಪಟ್ಟಿಯನ್ನು ಮೇಂಟೇನ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ರಾಜ್ಯದ ಗವರ್ನ್‌ಮೆಂಟ್ ಪ್ಲೀಡರ್ಸ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ನಂಬಳ ನೆರೆ ರಾಜ್ಯಗಳಿಗಿಂತ ಕಡಿಮೆ ಇದೆಯೆಂದು ತಮಗೆ ದೂರು ಬಂದಿಲ್ಲವೆ ? ಮತ್ತು ನೆರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಅವರಿಗೆ ನಂಬಳ ಕಡಿಮೆ ಇದ್ದರೆ ಅದನ್ನು ನೆರೆ ರಾಜ್ಯದವರ ಮಟ್ಟಕ್ಕೆ ತರುವುದಕ್ಕೆ ತಾವು ತಯಾರಾಗಿದ್ದೀರಾ ?

ಶ್ರೀ ಡಿ. ಕೆ. ನಾಯ್ಕರ್.—ನಮ್ಮ ರಾಜ್ಯದ ಗವರ್ನ್‌ಮೆಂಟ್ ಪ್ಲೀಡರುಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ನಂಬಳ ನೆರೆ ರಾಜ್ಯಗಳಿಗಿಂತ ಕಡಿಮೆ ಇದೆಯೆಂದು ನಮಗೆ ಯಾವ ದೂರು ಬಂದಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರು ಮತ್ತು ಗವರ್ನ್‌ಮೆಂಟ್ ಪ್ಲೀಡರುಗಳಿಗೆ ಅವರ ಸ್ಥಿತಿಗತಿಗಳಿಗೆ ಅನುಗುಣವಾಗಿ ನಂಬಳವನ್ನು ಏರಿಸಿದ್ದೇವೆ. ಆ ಬಗ್ಗೆ, ನಾವು ಅಡ್ವೋಕೇಟ್ ಜನರಲ್ ಅವರನ್ನೂ ಕೂಡ ಕನ್‌ಸರ್ಟ್ ಮಾಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ಈಗ ಇರತಕ್ಕ ಪಬ್ಲಿಕ್ ಪ್ರಾಸಿಕ್ಯೂಟರುಗಳು ಕೋಮು ವಾರು ಭಾವನೆಯನ್ನು ಹುಟ್ಟಿಸುತ್ತಾರೆ ಎಂದು ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಬಂದಿದ್ದರೂ ಕೂಡ ಅವರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ಅಂಥಾ ರಿಪೋರ್ಟ್ ನಮ್ಮ ಕಡೆ ಯಾವುದೂ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಡಿಸ್ಟ್ರಿಕ್ಟ್‌ಮೈಜ್ ಮತ್ತು ಡಿವಿಜನರ್‌ಮೈಜ್ ಈ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಈ ಅಧಿಕಾರಿಗಳು ಸರ್ಕಾರಿ ನೌಕರರ ಹಾಗೆ ಕಂಪ್ಲೀಟಾಗಿ ಸರ್ವೀಸಿನಲ್ಲಿ ಇರುವುದಿಲ್ಲ. ಆದ್ದರಿಂದ ಇವರಿಗೆ ಸೀನಿಯಾರಿಟಿ ಲಿಸ್ಟನ್ನು ಮೇಂಟೇನ್ ಮಾಡುವುದ ಕ್ಯಾಗುವುದಿಲ್ಲ. ಹೆಚ್ಚು ಅನುಭವ ಇರತಕ್ಕ ವಕೀಲರನ್ನು ಯಾರನ್ನು ಡೆಪ್ಯೂಟಿ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಜಡ್ಜ್ ರೆಕಮೆಂಡ್ ಮಾಡುತ್ತಾರೆಯೋ ಅಂಥವರನ್ನು ಮಾತ್ರ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಗವರ್ನ್‌ಮೆಂಟ್ ಪ್ಲೀಡರ್ ಆಗಿ ನೇಮಕ ಮಾಡುತ್ತೇವೆ. ಅದರಲ್ಲಿ ಏನಾದರೂ ಪಾರ್ಸಿಯಾಲಿಟಿ ನಡೆಯುತ್ತದೆ ಎಂದರೆ ಆ ಬಗ್ಗೆ ನಾವು ಕಾಳಜಿ ತೆಗೆದುಕೊಳ್ಳುತ್ತೇವೆ.

LOANS GIVEN TO PRIVATE INDUSTRIES IN SOUTH KANARA.

265. Sri A. G. KODGI (Baindur) —

Will the Minister for Industries be pleased to state :—

The total amount of loans given to Industries to private sector in South Kanara and the names of the industries or the persons to whom the loans are given and the amount of loans given to them ?

Sri S. M. KRISHNA (Minister for Industries).—

Under the Mysore State Aid to Industries Act, a sum of Rs. 2,96,101.50 was sanctioned in respect of 31 cases, the list is printed below.

List showing the names of industrialists to whom loans were sanctioned under the Mysore State Aid to Industries Act in South Kanara District.

	Name and address of the loanee	*Loan Sanctioned*
1	2	3
		Rs.
1	Sri K. Upendra Bhat, Propr. Kohinur Industrials (India), Kallianpur.	2,000
2	Sri A. A. Abdulla. Propr. Cement Pot Works, Shiribeedu, Udipi.	2,000
3	Sri A. Z. Jawad Ali, Propr. Jawead Printing Press, Kaup.	2,000
4	Sri K. Damodar Acharya, Blacksmith, Chikansal Road, Coondapur.	2,000
5	Sri M. Kunder, Master Weaver, Ashoknagar, Mangalore.	2,000
6	Sri Percy Oliver Shiri, Propr. Alpha Refrigeration Works, Mangalore.	2,000
7	Sri T. Purushotham Shenoy, Propr. Aruna Printers, Moodabidri.	2,000
8	Sri U. K. Govindan, Propr. Free India Metal Industries and Welding Works, Ullal.	2,000
9	Sri M. Abdul Rahiman, Propr. Sukriya Industries, Puttur.	2,000
10	Sri A.A. Abdulla, Propr. Janatha Cane Industries, Udipi.	2,000
11	Sri H. Baghava Naik, Hebri, Karkala Taluk ..	2,000
12	Sri Joe D'Costa, Propr. Excel Enterprises, Gollarkery, Mangalore.	2,000
13	Sri S. Ishwara Bhat, Propr. Majestic Coffee Suppliers, Puttur.	2,000

	Name and address of the loanee	*Loan Sanctioned*
1	2	3
		Rs.
14	Sri M. Harischandra Achari, Propr. Canara Furniture Works, Udipi.	2,000
15	Sri K. Venkatesh Pai, Propr. Kala Industries, Hosabettu, Mangalore Tq.	2,000
16	Sri Edward Ammanna, Propr. Edward Iron and Steel Works, Balmatta, Mangalore.	2,000
17	Sri H. Upendra Shenoy, Propr. Best Company, Udipi.	5,000
18	Sri M. Shekar, Propr. Sharada Engineering Works, Malpe, Udipi Taluk.	24,150
19	Sri U. Mohammed Bava, Propr. Oil Mill, Bunglow Compound, Ullal.	21,500
20	Sri Z. Narayana Shenoy, Managing Partner M/s. Ganesh Book Depot, Uppinangady.	10,000
21	Smt. Anusuya Rai, Propr. Mahalingeshwara Soda Shop,Puttur.	5,000
22	Sri T. Subraya Bhat, Puttur ..	24,999
23	Sri Harold M. D'Souza, Managing Partner, M/s. Adarsh Printing Press, Kankanady, Mangalore.	8,452.50
24	Sri K. J. Punja, Propr. Raja Garments, Mangalore.	21,000
25	Smt. K. Kalyani, Propr. Sri Krishna Industries, Chikansal Road, Coondapur.	23,000
26	Sri B. H. Ravindra Pai, Propr. B. H. Ravindra Pai and Co., Ashoknagar, Mangalore.	20,000
27	Sri K. Srinivasa, Kuddanaya, Propr. Durga Mills, Bolar, Puttur.	20,000
28	Sri K. Purandra Vittaldas, Proper. Vijaya Industries, Kuthethur, Bajav, Mangalore Tq.	20,000
29	Sri B. Veerappa, Davadiga, Managing Partner, M/s. Veeraraja Roasting and Flour Mills, Bokkapatna, Mangalore.	24,000
30	Sri K. J. Umesh Achar, Propr. Rajeshwari Jewellers, Bejai, Mangalore.	13,000
31	Sri James Christannada Kounds, Mangalore	24,000

ಶ್ರೀ ಎ. ಜಿ. ಕೊಡಗಿ.—ತಮ್ಮ ಉತ್ತರದಲ್ಲಿ ಮೈಸೂರು ರಾಜ್ಯದ ಕೈಗಾರಿಕೆಗಳಿಗೆ ಸಹಾಯ ನೀಡುವುದಕ್ಕೆ ಸಂಬಂಧಿಸಿದ ಶಾಸನದ ಮೇರೆಗೆ ಎಂಬ ಶಬ್ದವನ್ನು ಉಪಯೋಗಿಸಿದ್ದೀರಿ. ಈ ಶಾಸನವಲ್ಲದೆ ಇತರೇ ಶಾಸನಗಳ ಅನ್ವಯ ಏನಾದರು ಈ ಜಿಲ್ಲೆಗೆ ಖಾನಗೀ ಕ್ಷೇತ್ರದ ಕೈಗಾರಿಕೆಗಳಿಗೆ ಸಾಲಗಳನ್ನು ಎಷ್ಟು ಮಂಜೂರು ಮಾಡಲಾಗಿದೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ಎಸ್. ಎಂ. ಕೃಷ್ಣ.—ಖಾನಗೀ ಕ್ಷೇತ್ರದ ಕೈಗಾರಿಕೆಗಳಿಗೆ ಸಾಲ ನೀಡುವುದಕ್ಕೆ ಅವಕಾಶ ಇರುವುದು ಸ್ಟೇಟ್ ಏಡ್ ಟು ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಮಾತ್ರ. ಅದರ ಪ್ರಕಾರ ಎಷ್ಟು ಜನರಿಗೆ ಸಾಲ ಕೊಡಲಾಗಿದೆ ಎಂಬ ವಿವರಗಳನ್ನು ಸಭೆಯ ಮುಂದಿರುವ ಪಟ್ಟಿಯಲ್ಲಿ ನಮೂದಿಸ ರಾಗಿದೆ.

ಶ್ರೀ ಎ. ಜಿ. ಕೊಡಗಿ.—ಎಷ್ಟು ಜನರು ತೆಗೆದುಕೊಂಡ ಸಾಲವನ್ನು ವಾಪಸ್ ಮಾಡಿಲ್ಲ ಎಂಬ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಎಷ್ಟು ಜನರಿಗೆ ಸಾಲ ಕೊಡಲಾಗಿದೆ ಎಂಬುದಕ್ಕೆ ಮಾತ್ರ ಪ್ರಶ್ನೆ ಸೀಮಿತವಾಗಿದೆ. ಅದರ ಬಗ್ಗೆ ಮತ್ತೊಂದು ಪ್ರಶ್ನೆ ಕೇಳಿದರೆ, ಯಾರು ಯಾರು ವಾಪಸ್ ಮಾಡಿಲ್ಲ, ಸರ್ಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ ಎಂಬತಕ್ಕಂತ ವಿವರಗಳನ್ನು ಸವಿಸ್ತಾರ ವಾಗಿ ತಿಳಿಸುವುದಕ್ಕೆ ಅವಕಾಶವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಸಾಲ ಪಡೆದ ಖಾನಗೀ ಕೈಗಾರಿಕೆಗಳ ಪೈಕಿ ಎಷ್ಟು ಸಾಮಾನುಗಳನ್ನು ತಯಾರು ಮಾಡುವ ಸ್ಥಿತಿಗೆ ಬಂದಿವೆ, ಮತ್ತು ಎಷ್ಟು ಕೈಗಾರಿಕೆಗಳು ಮುಚ್ಚುವ ಸ್ಥಿತಿಗೆ ಬಂದಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್ ಎಂ. ಕೃಷ್ಣ.—ನಣ್ಣಪುಟ್ಟ ಕೈಗಾರಿಕೋದ್ಯಮಿಗಳಿಗೆ ವರ್ಕಿಂಗ್ ಕ್ಯಾಪಿಟಲನ್ನು ಪ್ರೊವೈಡ್ ಮಾಡಿಕೊಡಬೇಕೆಂಬ ಉದ್ದೇಶದಿಂದ ಈ ರೀತಿ ಸಾಲವನ್ನು ಕೊಡಲಾಗುತ್ತಿದೆ. ಇಲ್ಲಿ ಕೊಟ್ಟಿರುವ ಪಟ್ಟಿಯನ್ನು ನೋಡುವುದಾದರೆ ನಾಲ್ಕಾರು ಜನರಿಗೆ ಮಾತ್ರ ಭಾರಿ ಮೊತ್ತದ ಸಾಲವನ್ನು ಕೊಡಲಾಗಿದೆ. ಬಾಕಿಯವರಿಗೆಲ್ಲರಿಗೂ ಎರಡು ಸಾವಿರ ರೂಪಾಯಿಗಳಂತೆ ಹಂಚಿದ್ದೇವೆ. ನಮ್ಮ ಸರ್ಕಾರದ ಮಾಹಿತಿ ಪ್ರಕಾರ ಬಹುತೇಕ ಕೈಗಾರಿಕೆಗಳವರು ನಾವು ಕೊಟ್ಟ ಸಾಲವನ್ನು ಸದ್ವಿನಿಯೋಗ ಮಾಡಿಕೊಂಡಿದ್ದಾರೆ. ಯಾರಾದರೂ ದುರ್ವಿನಿಯೋಗ ಮಾಡಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದರೆ ಅಂತಹವರ ಮೇಲೆ ಕಾನೂನು ಪ್ರಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಎಚ್. ಬಿ. ಚೆನ್ನಪ್ಪ.—ನಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲಕ್ಕಾಗಿ ಎಲ್ಲ ರೆಕಾರ್ಡ್‌ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಿಕೊಟ್ಟರೆ ಅವರು ಸರ್ಕಾರದಿಂದ ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದವರು ಯಾವಾಗ ಹಣ ಒದಗಿಸುತ್ತಾರೆ ?

ಶ್ರೀ ಎಸ್. ಎಂ. ಕೃಷ್ಣ.—1970-71 ನೇ ಇಸವಿಯಲ್ಲಿ ಸ್ಟೇಟ್ ಏಡ್ ಟು ಇಂಡಸ್ಟ್ರೀ ಗೋಸ್ಕರ 46 ಲಕ್ಷ ರೂಪಾಯಿಗಳು ಆಯವ್ಯಯ ಅಂದಾಜಿನಲ್ಲಿ ಮಂಜೂರು ಆಗಿತ್ತು. 1971-72 ರಲ್ಲಿ ಇದು ಕೇವಲ 26 ಲಕ್ಷ 55 ಸಾವಿರ ರೂಪಾಯಿಗಳಿಗೆ ಮಾತ್ರ ನಿಂತಿತು. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು, ಕಳೆದ ಎರಡು ವರ್ಷಗಳಲ್ಲಿ ಯಾರು ಯಾರಿಗೆ ಮೊದಲನೆಯ ಕಂತನ್ನು ಮಂಜೂರು ಮಾಡಲಾಗಿದ್ದಿತೋ ಅಂತಹವರಿಗೆ ಮಾತ್ರ ಎರಡ ನೆಯ ಮತ್ತು ಮೂರನೆಯ ಕಂತುಗಳನ್ನು ವಿತರಣೆ ಮಾಡುವುದರ ಸಲುವಾಗಿ 26 ಲಕ್ಷ ರೂಪಾಯಿ ಗಳನ್ನು ವಿನಿಯೋಗಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದರಿಂದ ಹೊಸ ಅಪ್ಲಿಕೇಷನ್‌ಗಳನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ನಿರುದ್ಯೋಗಿ ಇಂಜಿನಿಯರ್‌ಗಳಿಗೆ ಸಾವತ್ರ ಸ್ಟೇಟ್ ಏಡ್ ಟು ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಸಾಲದ ಅಪ್ಲಿಕೇಷನ್ ಬಂದರೆ ಪರಿಶೀಲನೆ ಮಾಡಬಹುದೆಂದು ಸರ್ಕಾರ ಎಕ್ಸೆಪ್ಷನ್ ಮಾಡಿದೆ.

Sri B. B. SAYANAK.—May I know whether these persons in the private sector industries, to whom loans are given, have refunded any loan amount and if so, what is the percentage of loan that they have refunded ?

Sri S. M. KRISHNA.—This supplementary does not arise out of this Question.